# ಭಾರಂಗಿ ಗಿಡ ಬಲ್ಲಿರಾ?

ಚಿತ್ರ ಬರಹ:
**ಹರೀಶ್ ಹಳೆಮನೆ**





**ಕ**ರಾವಳಿ ಪ್ರದೇಶದ ಕಾಡುಗಳಲ್ಲಿ, ಗುಡ್ಡಗಳಲ್ಲಿ ಸಾಮಾನ್ಯವಾಗಿ ಕಂಡು ಬರುವ ಭಾರಂಗಿ ಗಿಡವಿದು. ತೀಕ್ಷ್ಣವಾದ ಪರಿಮಳವನ್ನು ಹೊಂದಿದ್ದು, ಅನೇಕ ಔಷಧೀಯ ಗುಣಗಳನ್ನು ಪಡೆದುಕೊಂಡಿದೆ.

ತಂಪು ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯುವ ಇದು ನಮ್ಮ ಕರಾವಳಿ ಜಿಲ್ಲೆಗಳ ಉದ್ದಕ್ಕೂ ಕಾಣಸಿಗುತ್ತದೆ. ಅಗಲವಾದ ಎಲೆಗಳ ಬದಿಯಲ್ಲಿ ಅರದಂತಹ ಕಚ್ಚು ಇದರ ವೈಶಿಷ್ಟ್ಯ. ಇದಕ್ಕೆ ಭಾಡಗೀ, ಕಿರುತೇಗ ಮುಂತಾದ ಹೆಸರುಗಳಿದ್ದು ಸಸ್ಯಶಾಸ್ತ್ರೀಯವಾಗಿ 'ಕ್ಲೆರೋಡೆಂಡ್ರಾನ್ ಸೆರ್ರಾಟಂಮೂನ್' ಎಂಬುದಾಗಿ ಗುರುತಿಸಿ ಕೊಂಡಿದೆ. ಇದು ವರ್ಬನೇಸೀ ಕುಟುಂಬಕ್ಕೆ ಸೇರಿದೆ. ಚಿಕ್ಕ ಪೊದರಿನಂತೆ ಬೆಳೆಯುವ ಗಿಡವಾಗಿದ್ದು, ಕಡಿಯದೇ ಬಿಟ್ಟಲ್ಲಿ ಪುಟ್ಟ ಮರವಾಗಬಲ್ಲದು.

ಭಾರಂಗಿ ಗಿಡದಲ್ಲಿ ಐದು ಎಸಳುಗಳುಳ್ಳ ಸುಂದರ ಹೂ ಬಿಡುತ್ತದೆ. ಇದರಲ್ಲಿ ನಾಲ್ಕು ಎಸಳುಗಳು ಬಿಳಿ ಬಣ್ಣದಲ್ಲಿದ್ದರೆ ಒಂದು ಮಾತ್ರ ನಸುನೀಲಿ ಬಣ್ಣ ಹೊಂದಿರುತ್ತದೆ. ಆರ್ಕಿಡ್ ಹೂಗಳಂತೆ ಕಾಣಿಸುವ ಈ ಹೂಗಳು ಮುಂದೆ ಹಸಿರು ಬಣ್ಣದ ಚಿಕ್ಕ ಕಾಯಿಗಳನ್ನು ಬಿಡುತ್ತವೆ. ಭಾರಂಗಿಯ ಎಲೆಗಳಿಗೆ ಹಾಗೂ ಕಾಂಡಕ್ಕೆ ತೀಕ್ಷ್ಣವಾದ ಸುವಾಸನೆಯಿದೆ. ಆದರೆ ಇದರ ಸುಂದರವಾದ ಹೂಗಳಿಗೆ ಮಾತ್ರ ಯಾವುದೇ ಸುವಾಸನೆ ಇಲ್ಲ!

ತೀಕ್ಷ್ಣ ಸುಗಂಧ ಇರುವುದರಿಂದಲೋ ಏನೋ, ಕೆಲವೊಂದು ವಿಷಕಾರಿ ಹಾವುಗಳ ಕಡಿತಕ್ಕೆ ಹಳ್ಳಿಗಳಲ್ಲಿ ಇದರ ಎಲೆಗಳನ್ನು ಔಷಧವಾಗಿ ಬಳಸುತ್ತಾರೆ. ಶರೀರಕ್ಕೆ ಸೇರಿಹೋದ ನಂಜಿನ ನಿವಾರಣೆಯಲ್ಲಿ ಇದರ ಬಳಕೆ ವಿಶೇಷ ಮಹತ್ವ ಪಡೆದುಕೊಂಡಿದೆ. ಜ್ವರ, ಆಸ್ತಮಾ, ಕಣ್ಣಿನ ರೋಗಗಳ ಚಿಕಿತ್ಸೆಗಳಲ್ಲೂ ಇದು ಉಪಯುಕ್ತ ಸಸ್ಯವಾಗಿ ಬಳಕೆಯಲ್ಲಿದೆ.